# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತಿಪಟೂರು.

# ಸಿ.ಸಿ.ನಂ. 909/2018

ಪಿರ್ಯಾದುದಾರರು : ವೈ. ಎಲ್. ಲಿಂಗಾ ರೆಡ್ಡಿ

ವಿರುದ್ಧ

ಆರೋಪಿ : **ಹೆಚ್. ಶಹನಾಜ್**
**ಕೋಂ ಅನ್ಸರ್**, 53 **ವರ್ಷ**,
Asst. Mistress at Gargi
Nikethana School,
Bharathi Vidya Samsthe,
ಚಿಕ್ಕಮಗಳೂರು.

## <u>ಆರೋಪಣೆ</u>

ಶ್ರೀ ಸತೀಶ್. ಎಸ್.ಟಿ., ಬಿ.ಕಾಂ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತಿಪಟೂರು ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ವಿರುದ್ಧ ಮಾಡುತ್ತಿರುವ ಆರೋಪಣಾ ಸಾರಾಂಶವೇನೆಂದರೆ:

ಮೇಲ್ಕಂಡ ಆರೋಪಿಯಾದ ನೀವು ಪಿರ್ಯಾದಿಯವರಿಂದ ದಿಃ 27.06.2018 ರಂದು ರೂ.**3,50,000/-** ಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲದ ತೀರುವಳಿ ಸಲುವಾಗಿ ರೂ.**3,50,000/-** ಗಳಿಗೆ ಚಿಕ್ಕಮಗಳೂರು ಶಾಖೆಯ ಸಿಂಡಿಕೇಟ್ ಬ್ಯಾಂಕಿನ ದಿಃ **27.08.2018** ರ ಚೆಕ್ ನಂ. **289881** ನ್ನು ಪಿರ್ಯಾದಿ ಪರವಾಗಿ ವಿತರಿಸಿದ್ದು, ನಂತರ ಪಿರ್ಯಾದಿಯವರು ಸದರಿ ಚೆಕ್ಕನ್ನು ತಿಪಟೂರು ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ಚೆಕ್.ದಾತರ ಖಾತೆಯಲ್ಲಿ ಸಾಕಷ್ಟು ಹಣ ಲಭ್ಯವಿಲ್ಲ **(Funds insufficient)** ಎಂದು ತಿಳಿಸಿ ದಿಃ 27.08.2018 ರಂದು ಹಿಂಬರಹದೊಂದಿಗೆ ಸದರಿ ಚೆಕ್ಕನ್ನು

ಪಿರ್ಯಾದಿಗೆ ಹಿಂದಿರುಗಿಸಿದ್ದು, ತದನಂತರ ಪಿರ್ಯಾದುದಾರರು ದಿಃ 29.08.2018 ರಂದು ಆರೋಪಿಯಾದ ನಿಮಗೆ ಹಣ ತಗಾದೆ ಮಾಡಿ ನೊಂದಾಯಿತ ಅಂಚೆ ಮೂಲಕ ನೋಟೀಸ್ ಕಳುಹಿಸಿದ್ದು, ಸದರಿ ನೋಟೀಸ್ ನಿಮಗೆ ಜಾರಿಯಾಗಿದ್ದು, ಅದಾದ ನಂತರವೂ ಸಹ ಆರೋಪಿಯಾದ ನೀವು ಪಿರ್ಯಾದಿಗೆ ಸಾಲದ ಹಣವನ್ನು ಹಿಂತಿರುಗಿಸಿರುವುದಿಲ್ಲ ಹಾಗೂ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಚೆಕ್ಕನ್ನು ವಿತರಿಸಿದ್ದು, ಸದರಿ ನಿಮ್ಮ ಕೃತ್ಯವು ವ್ಯವಹರಣೀಯ ಲಿಖಿತಗಳ ಅಧಿ ನಿಯಮ ಕಲಂ. **138** ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿರುತ್ತದೆ ಎಂದು ನಿಮ್ಮ ಮೇಲೆ ಆರೋಪಿಸಲಾಗಿದೆ.

(ಸತೀಶ್. ಎಸ್.ಟಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,
ತಿಪಟೂರು

## <u>ಆರೋಪಿಯ ಹೇಳಿಕೆ</u>

ಪ್ರಶ್ನೆ:1) ಇದೀಗ ಓದಿ ಹೇಳಿದ ಆರೋಪಣಾ ಸಾರಾಂಶವು ನಿಮಗೆ ಅರ್ಥವಾಯಿತೇ?

ಉತ್ತರ:-

ಪ್ರಶ್ನೆ:2) ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗ ಬೇಕೇ?

ಉತ್ತರ:-

(ದಿನಾಂಕ: **06.11.2019** ರಂದು ತೆರೆದ ನ್ಯಾಯಾಲಯದಲ್ಲಿ ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ್ದು, ಮೇಲಿನ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳನ್ನು ಪಡೆದು ಯಥಾವತ್ತಾಗಿ ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,
ತಿಪಟೂರು